# ಕರ್ನಾಟಕ ಲೋಕಾಯುಕ್ತ

ಕಂಪ್ಲೆಂಟ್/ಉಪಲೋಕ್/ಜಿಎಲ್‌ಬಿ/1286-2021
ಮಂಡನಾಧಿಕಾರಿಗಳ ಶಾಖೆ

ಬಹುಮಹಡಿಗಳ ಕಟ್ಟಡ
ಡಾ. ಬಿ.ಆರ್.ಅಂಬೇಡ್ಕರ್ ವೀದಿ,
ಬೆಂಗಳೂರು, ದಿನಾಂಕ: 22/12/2021.

## ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ 12(3) ರನ್ವಯ ಶಿಫಾರಸ್ಸು ವರದಿ

**ವಿಷಯ:** ಶ್ರೀ.ಮಲ್ಲಪ್ಪ, ಹೆಚ್.ಸಿ.289, ಚಿಂಚೋಳಿ ಪೊಲೀಸ್ ಠಾಣೆ , ಚಿಂಚೋಳಿ ತಾಲ್ಲೂಕು, ಕಲಬುರ್ಗಿ ಜಿಲ್ಲೆ, – ಆದ ಇವರು ಸರ್ಕಾರಿ/ಸಾರ್ವಜನಿಕ ನೌಕರರಾಗಿದ್ದು, ದುರ್ನಡತೆ ಎಸಗಿರುವ ಬಗ್ಗೆ ಇವರ ವಿರುದ್ಧ ನಡವಳಿ ಕುರಿತು.

----

1. ಪೊಲೀಸ್ ಇನ್ಸ್‌ಪೆಕ್ಟರ್, ಭ್ರಷ್ಟಾಚಾರ ನಿಗ್ರಹದಳ ಪೊಲೀಸ್ ಠಾಣೆ, ಕಲಬುರ್ಗಿ ಜಿಲ್ಲೆ, (ಇನ್ನು ಮುಂದೆ ತನಿಖಾಧಿಕಾರಿ ಎಂದು ಕರೆಯಲ್ಪಡುತ್ತಾರೆ). ಇವರು ಸಲ್ಲಿಸಿದ ತನಿಖಾ ವರದಿ ಮತ್ತು ಸಂಬಂಧಿಸಿದ ದಾಖಲೆಗಳನ್ನು ಪರಿಶೀಲಿಸಿದಾಗ, ಸದರಿ ವರದಿಯಲ್ಲಿ **ಶ್ರೀ.ಮಲ್ಲಪ್ಪ, ಹೆಚ್.ಸಿ.289, ಚಿಂಚೋಳಿ ಪೊಲೀಸ್ ಠಾಣೆ , ಚಿಂಚೋಳಿ ತಾಲ್ಲೂಕು, ಕಲಬುರ್ಗಿ ಜಿಲ್ಲೆ,** (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ದೂರುದಾರರಾದ **ಶ್ರೀ ಪ್ರಕಾಶ ಬಿನ್ ಲಕ್ಷ್ಮಣ ಹೊನಳ್ಳಿ, ಗ್ರಾಮ ಲೇಖಪಾಲಕರು, ಮುಗಳ ನಾಗಾಂವ, ಚಿತ್ತಾಪೂರ ತಾಲ್ಲೂಕು,** (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ಇವರು ಭೇಟಿ ಮಾಡಿದಾಗ ಲಂಚದ ಹಣಕ್ಕೆ ಬೇಡಿಕೆ ಇಟ್ಟು ಅದನ್ನು ಪಡೆದು, ದುರ್ನಡತೆ ತೋರಿಸಿರುವುದು ಮೇಲ್ನೋಟಕ್ಕೆ ಕಂಡು ಬಂದಿದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆ 1984, ಕಲಂ 7(2) ರನ್ವಯ ಗೌರವಾನ್ವಿತ ಉಪಲೋಕಾಯುಕ್ತರು ಸ್ವಯಂ ಪ್ರೇರಿತ ತನಿಖೆಯನ್ನು ಕೈಗೊಂಡಿರುತ್ತಾರೆ.

2. **ದೂರಿನ ಸಂಕ್ಷಿಪ್ತ ಮಾಹಿತಿ :-**

i) ದೂರುದಾರರ ವಿರುದ್ಧ ಮಾನ್ಯ ಜೆ.ಎಮ.ಎಫ್.ಸಿ. ಚಿಂದೋಳಿ, ನ್ಯಾಯಲಯದ ನಿರ್ದೇಶನದ ಮೇರೆಗೆ ಖಾಸಗಿ ದೂರು ಪ್ರಕರಣ ನಂ: 213/2017 ಬಾ.ದಂ.ಸಂ. ಕಲಂ 323,324, 504, 506, 498, ಸ/ವಾ 34 ಪ್ರಕಾರ, ಚಿಂಚೋಳಿ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುತ್ತದೆ. ಎದುರುದಾರರು, ದಿನಾಂಕ: 18-03-2018 ರಂದು ಸುಮಾರು 02 ಪಿ.ಎಂ ವೇಳೆಯಲ್ಲಿ, ಮೊಬೈಲ್ ನಂ: 9741149100 ರಿಂದ ದೂರುದಾರರ ಮೊಬೈಲ್ ನಂ: 9880587963 ಗೆ, ಕರೆ ಮಾಡಿದ್ದು, ಎದುರುದಾರರು, ದೂರುದಾರರಿಗೆ ಹಲವು ಭಾರಿ

ಪೋನ್ ಮಾಡಿದರೂ ಕೂಡ ಠಾಣೆಗೆ ಬಂದಿರುವುದಿಲ್ಲ ಅಂತ ಹೇಳಿರುತ್ತಾರೆ. ಅದಕ್ಕೆ ದೂರುದಾರರು ನನ್ನ ಹತ್ತಿರ ಹಣ ಇಲ್ಲ ಅದಕ್ಕೆ ನಾನು ಬಂದಿಲ್ಲ ಅಂತ ಅಂದಾಗ ಎದುರುದಾರರು, ದೂರುದಾರರಿಗೆ ನಿಮ್ಮ ಪ್ರಕರಣದಲ್ಲಿ 05 ಜನ ಇದ್ದು, ಪ್ರತಿಯೊಬ್ಬರಿಗೆ 5000/– ರೂ.ಗಳಂತೆ ಮತ್ತು ಪಿ.ಎಸ್.ಐ ರವರಿಗೆ 15000/– ರೊಪಾಯಿ ಲಂಚದ ಹಣ ಕೊಡು, ನಾನು ಪ್ರಕರಣದಲ್ಲಿ ಯಾವುದೇ ತೊಂದರೆ ಆಗದಂತೆ ನೋಡಿಕೊಳ್ಳುತ್ತೇನೆಂದು ಹೇಳಿದ್ದು, ಅದಕ್ಕೆ ದೂರುದಾರರು ನಾನು ವಿಚಾರ ಮಾಡಿ ಹೇಳುತ್ತೇನೆ ಎಂದು ಹೇಳಿರುತ್ತಾರೆ. ಸದರಿ ಸಂಭಾಷಣೆಯನ್ನು ದೂರುದಾರರು ತನ್ನ ಮೊಬೈಲ್ ನಲ್ಲಿ ರೆಕಾರ್ಡ್ ಮಾಡಿಕೊಂಡಿರುತ್ತಾರೆ. ದಿನಾಂಕ: 25–05–2018 ರಂದು 5.46 ಪಿಎಮ್ ಸಮಯದಲ್ಲಿ, ಎದುರುದಾರರು ತನ್ನ ಮೊಬೈಲ್ ನಂ: 9741149100 ರಿಂದ ದೂರುದಾರರ ಮೊಬೈಲ್ ನಂ: 9880587963 ಗೆ ಕರೆ ಮಾಡಿ, ಸಾಹೇಬರಿಗೆ 30,000/– ರೂ ಎದುರುದಾರರಾದ ತನಗೆ 20,000/– ರೂ. ಲಂಚದ ಹಣ ಬೇಡಿಕೆ ಇಟ್ಟಿದ್ದು, ಸದರಿ ಸಂಭಾಷಣೆಯನ್ನು ಸಹ ದೂರುದಾರರು ತನ್ನ ಮೊಬೈಲ್‌ನಲ್ಲಿ ರೆಕಾರ್ಡ್ ಮಾಡಿಕೊಂಡಿರುತ್ತಾರೆ. ದಿ: 26/05/2018 ರಂದು ದೂರುದಾರರು ಪೊಲೀಸ್ ಉಪಾಧೀಕ್ಷಕರು, ಭ್ರಷ್ಟಾಚಾರ ನಿಗ್ರಹ ದಳ, ಪೊಲೀಸ್ ಠಾಣೆ, ಕಲಬುರಗಿ, ಇವರಿಗೆ ದೂರನ್ನು ನೀಡಿದ್ದು, ಸದರಿ ದೂರು ಮೊ.ಸಂ: 6/2018 ಲಂಚ ಪ್ರತಿಬಂಧಕ ಕಾಯ್ದೆ 1988ರ ಕಲಂ 7ರ ಅಡಿಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

ii). ದಿನಾಂಕ: 26/5/2018 ರಂದು, ತನಿಖಾಧಿಕಾರಿಯು ಪಂಚರಾದ ಶ್ರೀ ಪರಶುರಾಮ, ಪಂಚ–1, ಶ್ರೀ ಅಶೋಕ ಕುಮಾರ ಪಂಚ–2 ಇವರನ್ನು ಬರಮಾಡಿಕೊಂಡು, ದೂರುದಾರರನ್ನು ಪರಿಚಯಿಸಿ ದೂರಿನ ವಿಚಾರವನ್ನು ತಿಳಿಸಿಕೊಟ್ಟಿರುತ್ತಾರೆ. ದೂರುದಾರರು ಎದುರುದಾರರಿಗೆ ಕೊಡಲು ತಂದಿದ ಲಂಚದ ಹಣ 20,000/– ರೂ.ಗಳನ್ನು (2000 x 10) ಹಾಜರುಪಡಿಸಿರುತ್ತಾರೆ. ಪಂಚ–1 ಹಣದ ಮೌಲ್ಯ ಮತ್ತು ನಂಬರನ್ನು ಪರಿಶೀಲಿಸಿದ್ದು, ಪಂಚ–2 ರವರು ಅದನ್ನು ಪ್ರತ್ಯೇಕವಾಗಿ ಹಾಳೆಯಲ್ಲಿ ನಮೂದಿಸಿರುತ್ತಾರೆ. ತನಿಖಾಧಿಕಾರಿಯ ಸೂಚನೆಯ ಮೇರೆಗೆ ಪಂಚ–1 ರವರು, ಪೊಲೀಸ್ ಸಿಬ್ಬಂದಿಯಿಂದ ಫಿನಾಪ್ತಿಲಿನ್ ಪೌಡರ್ ಲೇಪಿಸಿದ ಲಂಚದ ಹಣವನ್ನು ಎಣಿಸಿ ದೂರುದಾರರ ಪ್ಯಾಂಟಿನ ಹಿಂದಿನ ಜೇಬಿನಲ್ಲಿಟ್ಟಿರುತ್ತಾರೆ. ನಂತರ ತನಿಖಾಧಿಕಾರಿ ದೂರುದಾರರಿಗೆ, ನಿಗದಿತ ಸೂಚನೆ ನೀಡಿ, ಎದುರುದಾರರು ಲಂಚದ ಹಣವನ್ನು ಕೇಳಿ ಪಡೆದರೆ, ದೂರುದಾರರು ಕರವಸ್ತ್ರದಿಂದ ತನ್ನ ಮುಖವನ್ನು ಒರೆಸಿಕೊಳ್ಳುವ ಮೂಲಕ ಸೂಚನೆ ನೀಡಬೇಕೆಂದು ತಿಳಿಸಿರುತ್ತಾರೆ ಹಾಗೂ ಪಂಚ–2 ದೂರುದಾರರ ಜೊತೆ ಇದ್ದು ವಿದ್ಯಮಾನವನ್ನು ಗಮನಿಸಬೇಕೆಂದು ಹೇಳಿರುತ್ತಾರೆ. ಈ ಸಂಬಂಧವಾಗಿ ತನಿಖಾಧಿಕಾರಿ ವಹಿಸಿಕೊಡುವ ಪಂಚನಾಮೆಯನ್ನು ದಿನಾಂಕ: 26/05/2018 ರಂದು ಮಧ್ಯಾಹ್ನ 11.40 ಗಂಟೆಯಿಂದ 1.40 ರವರೆಗೆ ಪಂಚರ ಸಮಕ್ಷಮ ಮಹಜರ್ ಬರೆದಿರುತ್ತಾರೆ.

iii. ಅದೇ ದಿನ, ಅಂದರೆ 26-05-2018 ರಂದು, ತನಿಖಾಧಿಕಾರಿ ದೂರುದಾರರನ್ನು, ಪಂಚರನ್ನು ಹಾಗೂ ಸಿಬ್ಬಂದಿಯನ್ನು ವಾಹನದಲ್ಲಿ ಕರೆದುಕೊಂಡು, 3.00 ಪಿ.ಎಂ. ಚಿಂಚೋಳಿ ಬಸ್ ನಿಲ್ದಾಣದ ಹತ್ತಿರ ಬಂದಿರುತ್ತಾರೆ. ನಂತರ ತನಿಖಾಧಿಕಾರಿಯ ಸೂಚನೆಯಂತೆ, ದೂರುದಾರರು ಎದುರುದಾರರ ಮೊಬೈಲ್ ನಂ: 9741149100 ಗೆ ಸುಮಾರು 03.04 ಗಂಟೆ ಪಿ.ಎಂ ಸಮಯದಲ್ಲಿ ಕರೆ ಮಾಡಿ, ತಾನು ಚಿಂದೋಳಿಗೆ ಬಂದಿರುತ್ತೇನೆ, ಎಲ್ಲಿಗೆ ಬರಬೇಕು ಎಂದು ಕೇಳಿದಾಗ, ಎದುರುದಾರರು ದೂರುದಾರರಿಗೆ, ಕೋರ್ಟ್ ಗೇಟ್ ಹತ್ತಿರ ಬರಲು ಸೂಚಿಸಿರುತ್ತಾರೆ. ನಂತರ ಅದೇ ದಿನ ಸಮಯ 03: 08 ಪಿಎಮ್ ಸಮಯಕ್ಕೆ ಎದುರುದಾರರು, ದೂರುದಾರರ ಮೊಬೈಲ್‌ಗೆ ಕರೆ ಮಾಡಿ, ಕೋರ್ಟ್ ಗೇಟ್ ಎದುರುಗಡೆ ಇರುವ ದುರ್ಗಾ ಹೊಟೇಲ್ ಹತ್ತಿರ, ತಾನು ಇರುವುದಾಗಿ, ದೂರುದಾರರು ಅಲ್ಲಿಗೆ ಬರುವಂತೆ ತಿಳಿಸಿರುತ್ತಾರೆ ಹಾಗೂ ಎದುರುದಾರರು ಹಿರೋ ಹೊಂಡ ಮೋಟಾರ್ ಸೈಕಲ್ ನಂ: ಕೆಎ.32 ವಿ 2453 ರಲ್ಲಿ ಬಂದು ದೂರುದಾರರ ಸಂಗಡ ದುರ್ಗಾ ಹೊಟೇಲ್‌ನಲ್ಲಿ ಮಾತನಾಡಿ, ಉಪಹಾರ ಮಾಡಿಕೊಂಡು ದೂರುದಾರರನ್ನು, ನಿಮ್ಮ ಪ್ರಕರಣದ ಬಗ್ಗೆ ಇಲ್ಲಿ ಮಾತಾನಾಡುವುದು ಬೇಡ, ಜನ ಸಂದಣಿ ಇದೆ, ಎಂದು ಹೇಳಿ ದೂರುದಾರರನ್ನು, ಎದುರುದಾರರು ತನ್ನ ಮೋಟಾರ್ ಸೈಕಲ್ ನಲ್ಲಿ ಕೂರಿಸಿಕೊಂಡು, ನಂದಿ ಮೆಟಲ್ ವರ್ಕ್ಸ್ ಎಂಬ ಹೆಸರಿನ ಅಂಗಡಿಯ (ಭಾರತ್ ಕೆಫೆ) ಮುಂದೆ ಬಂದಿರುತ್ತಾರೆ.

iv). ನಂತರ ಎದುರುದಾರರು ಸಿದ್ದಪ್ಪ ಬಿನ್ ನಾಗಪ್ಪ ಎಂಬುವವರ ಬಟ್ಟೆ ಅಂಗಡಿಗೆ ಒಳಗೆ ಹೋಗಿ, ಸಿದ್ದಪ್ಪ ರೊಂದಿಗೆ ಮಾತನಾಡಿ, ಸಿದ್ದಪ್ಪ ರವರನ್ನು ಎದುರುದಾರರು ತನ್ನ ಸಂಗಡ ಕರೆದುಕೊಂಡು ಬಂದು ಭಾರತ್ ಕೆಫೆ ಚಹ ಹೋಟೆಲ್ ಅಂಗಡಿಯ ಒಳಗೆ ಹೋಗಿ ದೂರುದಾರರು, ಎದುರುದಾರರು ಮತ್ತು ಸಿದ್ದಪ್ಪ ಬೆಂಚ್ ಮೇಲೆ ಕುಳಿತ್ತಿದ್ದಾಗ, ಎದುರುದಾರರು ದೂರುದಾರರಿಗೆ, ಸಿದ್ದಪ್ಪ ರವರನ್ನು ಪರಿಚಯ ಮಾಡಿಸಿ, ಎದುರುದಾರರು ದೂರುದಾರರನ್ನು ಎಷ್ಟು ಹಣ ತಂದಿದ್ದೀಯಾ ಅಂತ ವಿಚಾರಿಸಿದಾಗ, ದೂರುದಾರರು ತಾನು 20,000/- ಗಳನ್ನು ತಂದಿದ್ದೀನಿ ಅಂತ ಹೇಳಿದ್ದಾಗ, ಎದುರುದಾರರು, ದೂರುದಾರರಿಗೆ, ಲಂಚದ ಹಣವನ್ನು ಸಿದ್ದಪ್ಪ ಎಂಬುವರ ಕೈಯಲ್ಲಿ ಕೊಡುವಂತೆ ತಿಳಿಸಿದಾಗ, ದೂರುದಾರರು ಇಲ್ಲ ಸಾರ್, ನಾನು ನಿಮ್ಮ ಕೈಯಲ್ಲಿ ನೀಡುತ್ತೇನೆ ಅಂತ ಅಂದಿದ್ದಕ್ಕೆ, ಎದುರುದಾರರು ಸಿದ್ದಪ್ಪ ಇವರು ನನಗೆ ಪರಿಚಯವಿರುತ್ತದೆ, ಅವರ ಕೈಯಲ್ಲಿ ಲಂಚದ ಹಣ ನೀಡಲು ಸೂಚಿಸಿದ ಮೇರೆಗೆ, ದೂರುದಾರರು ತನ್ನ ಶರ್ಟಿನ ಜೇಬಿನಿಲ್ಲಿ ಇದ್ದ ಪಿನಾಪ್ತಲಿನ್ ಪೌಡರ್ ಲೇಪಿತ ಹಣವನ್ನು ಸಿದ್ದಪ್ಪ ಇವರಿಗೆ ನೀಡಿದಾಗ, ಸದರಿ ಸಿದ್ದಪ್ಪ ಹಣವನ್ನು ಪಡೆದು ತಮ್ಮ ಎರಡೂ ಕೈಗಳಿಂದ ಎಣಿಸಿಕೊಂಡು ತಮ್ಮ ಪ್ಯಾಂಟಿನ ಎಡ ಜೇಬಿನಲ್ಲಿ ಇಟ್ಟುಕೊಂಡಿರುತ್ತಾರೆ. ನಂತರ, ದೂರುದಾರರು ತನಿಖಾಧಿಕಾರಿಗೆ ನಿಗದಿತ ಸೂಚನೆಯನ್ನು ಕೊಟ್ಟಿರುತ್ತಾರೆ. ತನಿಖಾಧಿಕಾರಿಯು ದೂರುದಾರರ ಸೂಚನೆಯನ್ನು ಅನುಸರಿಸಿ ಭಾರತ್ ಕೆಫೆ ಚಹ ಹೋಟೆಲ್ ಹತ್ತಿರ ಬಂದು ದೂರುದಾರರನ್ನು ವಿಚಾರಿಸಿ ಮಾಹಿತಿಯನ್ನು ಪಡೆದು, ದೂರುದಾರರು ಎದುರುದಾರರನ್ನು ಹಾಗೂ ಎದುರುದಾರರ ಸೂಚನೆ ಮೇರೆಗೆ ಲಂಚದ ಹಣದ ಬಗ್ಗೆ ಶ್ರೀ ಸಿದ್ದಪ್ಪ ಎಂಬುವವರನ್ನು

ತೋರಿಸಿಕೊಟ್ಟಿರುತ್ತಾರೆ. ನಂತರ ತನಿಖಾಧಿಕಾರಿಯವರು ಸದರಿ ಸ್ಥಳ ಸಾರ್ವಜನಿಕ ಸ್ಥಳವಾಗಿದರಿಂದ ಮುಂದಿನ ತನಿಖೆಯನ್ನು ಮುಂದುವರೆಸಲು ಚಂದಾಪುರ ಪ್ರವಾಸಿ ಮಂದಿರಕ್ಕೆ ದೂರುದಾರರನ್ನು ಸಿಬ್ಬಂದಿಯನ್ನು ಪಂಚರನ್ನು ಹಾಗೂ ಸಿದ್ದಪ್ಪ, ಎದುರುದಾರರನ್ನು ಕರೆದುಕೊಂಡು ಬಂದು ತನಿಖೆಯನ್ನು ಪ್ರಾರಂಭಿಸಿರುತ್ತಾರೆ. ನಂತರ, ತನಿಖಾಧಿಕಾರಿ ತನಿಖೆಯನ್ನು ಪ್ರಾರಂಭಿಸಿ, ಎದುರುದಾರರನ್ನು ಹಾಗೂ ಲಂಚದ ಹಣ ಸ್ವೀಕರಿಸಿದ ಶ್ರೀ ಸಿದ್ದಪ್ಪ ರವರನ್ನು ವಿಚಾರಿಸಿ, ಲಂಚದ ಹಣ ಎಲ್ಲಿ ಎಂದು ಕೇಳಿದಾಗ, ಸಿದ್ದಪ್ಪ ತನ್ನ ಪ್ಯಾಂಟಿನ ಎಡ ಜೇಬಿನಲ್ಲಿ ಇಟ್ಟುಕೊಂಡಿರುವುದಾಗಿ ತಿಳಿಸಿರುತ್ತಾರೆ. ನಂತರ ತನಿಖಾಧಿಕಾರಿಯವರ ಸೂಚನೆ ಮೇರೆಗೆ, ಸಿಬ್ಬಂದಿಯವರು ಸಿದ್ದಪ್ಪ ಇವರ ಎರಡೂ ಕೈ ಬೆರಳುಗಳನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಿಂದ ತೊಳೆದಾಗ, ದ್ರಾವಣವು ತಿಳಿ ಗುಲಾಬಿ ಬಣ್ಣಕ್ಕೆ ಬಂದಿರುತ್ತದೆ. ನಂತರ ತನಿಖಾಧಿಯವರು ಸೂಚನೆ ಮೇರೆಗೆ ಅಶೋಕ ಕುಮಾರ ಪಂಚ-2 ಇವರು ಸಿದ್ದಪ್ಪ ರವರ ಪ್ಯಾಂಟಿನ ಒಳಜೇಬಿನಲ್ಲಿದ್ದ ಹಣವನ್ನು ತೆಗೆದುಕೊಂದು ಅವುಗಳ ನಂಬರು ಮತ್ತು ಮೌಲ್ಯಗಳನ್ನು ಪರಿಶೀಲಿಸಿ, ಪಂಚ-1 ರವರು ಪ್ರಾಯೋಗಿಕ ಪಂಚನಾಮೆ ವೇಳೆಯಲ್ಲಿ ಬರೆದಿದ್ದ ನೋಟಿನ ನಂಬರು ಮತ್ತು ಮೌಲ್ಯಗಳನ್ನು ತಾಳೆ ಮಾಡಿಕೊಂಡು ಖಾತ್ರಿಪಡಿಸಿಕೊಂಡಿರುತ್ತಾರೆ. ನಂತರ ತನಿಖಾಧಿಕಾರಿಯವರು ಸದರಿ ಹಣವನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ. ನಂತರ, ತನಿಖಾಧಿಕಾರಿಯ ಸೂಚನೆ ಮೇರೆಗೆ ಸಿಬ್ಬಂದಿ ಸಿದ್ದಪ್ಪ ಇವರ ಪ್ಯಾಂಟಿನ ಎಡ ಜೇಬಿನ ಒಳಭಾಗವನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಿಂದ ತೊಳೆದಾಗ ದ್ರಾವಣವು ಗುಲಾಬಿ ಬಣ್ಣಕ್ಕೆ ಬಂದಿರುತ್ತದೆ. ನಂತರ ಸದರಿ ಪ್ಯಾಂಟನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ. ನಂತರ ತನಿಖಾಧಿಕಾರಿ ಎದುರುದಾರರನ್ನು ಲಂಚದ ಹಣ ಸಿದ್ದಪ್ಪರವರ ಮೂಲಕ ಲಂಚದ ಹಣ ಪಡೆದ ಬಗ್ಗೆ, ಸ್ವ-ರಕ್ಷಣಾತ್ಮಕ ಹೇಳಿಕೆ ಬರೆದುಕೊಡಲು ತಿಳಿಸಿದಾಗ, ಅದರಂತೆ ಎದುರುದಾರರು ತನ್ನ ಹೇಳಿಕೆಯಲ್ಲಿ **"ನಾನು ಮಲ್ಲಪ್ಪ ಸಿಹೆಚ್.ಸಿ 289 ಚಿಂಚೋಳಿ ಪೊಲೀಸ ಠಾಣೆ ಇಂದು ದಿನಾಂಕ: 26-05-2018 ರಂದು ಮದ್ಯಾಹ್ನ ಅಂದಾಜು 2: 10 ಗಂಟೆ ಸುಮಾರಿಗೆ ನಾನು ಪೊಲೀಸ ಠಾಣೆಯಲ್ಲಿದ್ದಾಗ ಚಿಂಚೋಳಿ ಪೊಲೀಸ ಠಾಣೆ ಗುನ್ನೆ ನಂ.177/17 ಕಲಂ.498(ಎ), 323,504,506 ಸಂಗಡ 34 ಐಪಿಸಿ ಕೇಸಿನ ಆಪಾದಿತನಾದ ಪ್ರಕಾಶ ಎನ್ನುವವರು ನನ್ನ ಮೊಬೈಲ್ ನಂಬರಿಗೆ ಫೋನ್ ಮಾಡಿ ಎಲ್ಲಿದ್ದಿರಾ ಸರ್ ಅಂತಾ ಕೇಳಿದಾಗ ಆಗ ನಾನು ಠಾಣೆಯಲ್ಲಿದ್ದ ಬಗ್ಗೆ ತಿಳಿಸಿದೆನು. ಆಗ ಅವರು ನಮ್ಮ ಭಾವನಿಂದ ನನಗೆ ಹೆದರಿಕೆ ಇದೆ ನೀವು ಬಸ್ ನಿಲ್ದಾಣದ ಕಡೆಗೆ ಬನ್ನೀರಿ ಅಂತಾ ಕೇಳಿಕೊಂಡಾಗ ಆಗ ನಾನು ನನ್ನ ಮೋಟಾರ ಸೈಕಲ್ ಮೇಲೆ ಬಸ್ ನಿಲ್ದಾಣಕ್ಕೆ ಹೋದೆನು. ಆಗ ನಾನು ನನ್ನ ಮೊಬೈಲ್ ಫೋನ್ ನಿಂದ ಅವರ ನಂಬರಿಗೆ ಕಾಲ್ ಮಾಡುವಾಗ ಇಬ್ಬರು ಎದುರು ಬಂದರು. ಇವರೆ ಇರಬಹುದು ಅಂತಾ ತಿಳಿದು ಅವರು ನೀವೆನಾ ಪೊಲೀಸರು ಅಂತಾ ಅಂದಾಗ ಹೌದು ಅಂತಾ ಹೇಳಿ ಟಿಫೀನ್ ಮಾಡೋಣ ನಡೆಯಿರಿ ಅಂತಾ ಅಂದಿದ್ದರಿಂದ ದುರ್ಗಾ ಹೋಟೆಲ್‌ಗೆ ಹೋದೇವು. ಮೂರು ಜನರು ಕೂಡಿ ಟಿಫೀನ್ ಮಾಡಿ ಬಳಿಕ ಪ್ರಕಾಶ ಇತನು ಹೇಗಾದರು ಮಾಡಿ ನಮ್ಮ ಕೇಸ್ ಮುಗಿಸಿರಿ ಅಂತಾ ಅಂದಾಗ ಇಲ್ಲಾ ಹಾಗೇ ಮಾಡಲು ಬರುವುದಿಲ್ಲ ನೀವು ಠಾಣೆಗೆ ಬಂದು ಅಧಿಕಾರಿಗಳ ಮುಂದೆ ನಿಮ್ಮ ಸಮಸ್ಯೆ ಹೇಳಿದರೆ ಅದಕ್ಕೆ ನ್ಯಾಯ ಸಿಗುತ್ತದೆ ಅಂತಾ ಅಂದೇನು. ಇಲ್ಲ ಸರ್ ನೀವು ಕೇಸ್ ಮುಗಿಸಿರಿ ಬೇಕಾದರೆ ಹಣ**

ತೆಗೆದುಕೊಳ್ಳಿರಿ ಅಂತಾ ಅಂದಾಗ ನನಗೆ ಹಣ ಬೇಡ ನಿಮಗೆ ಬಸ್ ನಿಲ್ದಾಣದಲ್ಲಿ ಬೇಕಾದರೆ ಬಿಡುತ್ತೇನೆ ಅಂತಾ ಹೇಳಿ ಆತನನ್ನು ನನ್ನ ಮೋಟಾರ ಸೈಕಲ್ ಹಿಂದುಗಡೆ ಕೂಡಿಸಿಕೊಂಡು ಬಸ್ ನಿಲ್ದಾಣಕ್ಕೆ ಹೋದೇನು. ಇಲ್ಲ ಸರ್ ಒಂದು ಜಾಗದಲ್ಲಿ ಕೂಡೋಣ ನಡೆಯಿರಿ ಅಂತಾ ಒತ್ತಾಯಿಸಿದಾಗ ಬುರಾನ ಅನ್ನುವವರ ಹೋಟೆಲ್‌ಗೆ ಹೋದೆವು ಹೋಟೆಲ್‌ನಲ್ಲಿ ನನಗೆ ಪರಿಚಯದವರಾದ ಸಿದ್ದಪ್ಪ ತಂದೆ ನಾಗಪ್ಪ ಕುರುಬರ ಇವರು ಕುಳಿತಿದ್ದು ನೋಡಿ ನನಗೆ ಮಾಡನಾಡಿಸಿದರು. ಅಲ್ಲಿ ಪ್ರಕಾಶ ಎನ್ನುವವರು ನನಗೆ ಹಣ ಕೊಡಲು ಒತ್ತಾಯ ಮಾಡಿದ್ದನ್ನು ನೋಡಿ ನಾನು ಹಣ ತೆಗೆದುಕೊಳ್ಳುವುದಿಲ್ಲ ನೀವು ಉದ್ದೇಶ ಪೂರ್ವಕವಾಗಿ ಈ ರೀತಿ ಮಾಡಬಾರದು ಅಂದ ಕೂಡಲೆ ನನ್ನೊಂದಿಗೆ ಮಾತಾಡಿದ ಸಿದ್ದಪ್ಪ ಇತನ ಕೈಯಲ್ಲಿ ಆ ಹಣ ಪ್ರಕಾಶ ಇತನು ಕೊಟ್ಟನು. ಆಗ ನಾನು ಈ ಸಹವಾಸ ಬೇಡ ಅಂತಾ ಹೇಳಿ ಅಲ್ಲಿಂದ ನಾನು ನನ್ನ ಮೋಟಾರ್ ಸೈಕಲ್ ತೆಗೆದುಕೊಂಡು ಹೋಗಬೇಕು ಅನುವಷ್ಟರಲ್ಲಿ ತಮ್ಮ ಸಿಬ್ಬಂದಿಯವರು ನನಗೆ ಹಿಡಿದು ಚಿಂಚೋಳಿ ಹೊಸ ಐ.ಬಿಗೆ ಕರೆದುಕೊಂಡು ಬಂದಿರುತ್ತಾರೆ. ನಾನು ಪ್ರಕಾಶ ಎನ್ನುವವನಿಗೆ ಕೇಸಿನ ತನಿಖೆ ಸಲುವಾಗಿ ಮೊಬೈಲ್‌ದಲ್ಲಿ ಅಧಿಕಾರಿಗಳು ಮೀಟಿಂಗ್ ತೆಗೆದುಕೊಂಡಾಗ, ಕೇಸಿನ ಪ್ರೊಗ್ರೆಸ್ ಬಗ್ಗೆ ಹೇಳಿದಾಗ ನಾನು ಪ್ರಕಾಶ ಅವರನ್ನ ಮೊಬೈಲ್‌ದಲ್ಲಿ ಠಾಣೆಗೆ ಬರುವಂತೆ ಮಾತಾನಾಡಿದ್ದು ಇರುತ್ತದೆ" ಎಂದು ಹೇಳಿಕೆ ನೀಡಿರುತ್ತಾರೆ.

v). ನಂತರ ತನಿಖಾಧಿಕಾರಿಯು, ಲಂಚದ ಹಣವನ್ನು ಎದುರುದಾರರ ಪರವಾಗಿ ಪಡೆದ ಸಿದ್ದಪ್ಪ ಇವರಿಗೆ ಸ್ವ-ರಕ್ಷಣಾ ಹೇಳಿಕೆ ನೀಡಲು ಹೇಳಿದಾಗ, ಸಿದ್ದಪ್ಪನಿಗೆ ಬರೆಯಲು ಬರದ ಕಾರಣ ಪಂಚಸಾಕ್ಷಿ ಪರಶುರಾಮ ಇವರು, ಸಿದ್ದಪ್ಪ ಹೇಳಿದಂತೆ ಬರೆದಿದ್ದು, ಅದರಲ್ಲಿ "ನಾನು ಸಿದ್ದಪ್ಪ ತಂದೆ ನಾಗಪ್ಪ ವಯಸ್ಸು 39 ವರ್ಷ, ಜಾತಿ: ಕುರುಬ ಉದ್ಯೋಗ ಮಾಲೀಕ ಸಂಗಮ ಸಾರಿ ಸೆಂಟರ್ ಚಿಂಚೋಳಿ, ಸಾ: ಪೋಲಕಪಳ್ಳಿ ತಾ: ಚಿಂಚೋಳಿ ಜಿ: ಕಲಬುರಗಿ ಆಗಿದ್ದು, ದಿನಾಂಕ: 26.05.2018 ರಂದು 3:40 ಮದ್ಯಾಹ್ನ ಗಂಟೆಗೆ ನಾನು ನನ್ನ ಬಟ್ಟೆ ಅಂಗಡಿಯಲ್ಲಿ ಇರುವಾಗ ನನಗೆ ಪರಿಚಯದವರಾದ ಮತ್ತು ನಮ್ಮೂರಿನವರಾದ ಮಲ್ಲಪ್ಪ ಪೋಲೀಸ ಇವರು ಒಂದು ಎದುರಿನ ವ್ಯಕ್ತಿಯನ್ನು ತೋರಿಸಿ ಇವರು ನಿನಗೆ ದುಡ್ಡು ಕೊಡುತ್ತಾರೆ ಎಂದು ಹೇಳಿದ್ದು ಆಗ ನಾನು ಎದುರಿನ ವ್ಯಕ್ತಿಯಿಂದ ಹಣವನ್ನು ಪಡೆದುಕೊಂಡಿದ್ದು ಇರುತ್ತದೆ. ಆಗ ಪೋಲೀಸರು ಬಂದು ನನ್ನನ್ನು ಮತ್ತು ಮಲ್ಲಪ್ಪ ಪೋಲೀಸ್ ಇವರನ್ನು ಹಿಡಿದುಕೊಂಡಿರುತ್ತಾರೆ" ಎಂದು ಸಿದ್ದಪ್ಪ ಹೇಳಿಕೆ ನೀಡಿರುತ್ತಾರೆ. ಮೇಲ್ಕಂಡ ಎದುರುದಾರರ ಹಾಗೂ ಸಿದ್ದಪ್ಪರವರ ಹೇಳಿಕೆಗಳನ್ನು ದೂರುದಾರರು ಪಂಚರು ಅಲ್ಲಗಳೆದಿರುತ್ತಾರೆ. ಈ ಸಂಬಂಧವಾಗಿ ತನಿಖಾಧಿಕಾರಿಗಳು ದಿ: 26/5/2018 ರಂದು ಸಂಜೆ 3.05 ರಿಂದ ರಾತ್ರಿ 8.10 ರವರೆಗೆ ಟ್ರಾಪ್ ಮಹಜರನ್ನು ಬರೆದಿರುತ್ತಾರೆ.

vi). ಸಿಡಿಗಳಲ್ಲಿ ದಾಖಲಾದ ಸಂಭಾಷಣೆ ದೂರುದಾರರ ಹಾಗೂ ಎದುರುದಾರರ ಮಾದರಿ ಧ್ವನಿಗೆ ಹೋಲಿಕೆ ಆಗುತ್ತದೆ ಎಂಬುದು ವಿಧಿ ವಿಜ್ಞಾನ ಪ್ರಯೋಗಾಲಯದ ವರದಿಯಿಂದ ಕಂಡುಬರುತ್ತದೆ.

vii). ರಾಸಾಯನಿಕ ತಜ್ಞರ ಪರೀಕ್ಷಾ ವರದಿಯಲ್ಲಿ ತನಿಖಾಧಿಕಾರಿಗಳು ಸಂಗ್ರಹಿಸಿದ ಮುದ್ದೇ ಮಾಲುಗಳಲ್ಲಿ ಫಿನಾಪ್ತಲಿನ್ ಅಂಶ ಧೃಡಪಟ್ಟಿದೆ.

viii). ಗೌರವಾನ್ವಿತರ ಆದೇಶದ ಅನ್ವಯದ ಎದುರುದಾರರಿಗೆ ದಿ: 03/08/2021 ಎದುರುದಾರರಿಂದ ಪರಿವೀಕ್ಷಣಾ ಟಿಪ್ಪಣಿಗೆ ಸಮಜಾಯಿಷಿ / ವಿವರಣೆಯನ್ನು ಕೇಳಲಾಗಿದ್ದು, ಎದುರುದಾರರು ದಿ: 30/08/2021 ರಂದು ತನ್ನ ಲಿಖಿತ ಸಮಜಾಯಿಷಿಕೆಯನ್ನು ಸಲ್ಲಿಸಿರುತ್ತಾರೆ. ಅದರ ಜೊತೆ ಪೊಲೀಸ್ ಅಧೀಕ್ಷಕರು, ಕಲಬುರಗಿ, ಇವರು ವಿಚಾರಣೆ ಸಂಖ್ಯೆ : ಇವಿ/04/ಕೆ/2018 ಡಿಒಬಿ ನಂ: 970/2018 ಮೇರೆಗೆ ಎದುರುದಾರರ ವಿರುದ್ಧ ವಿಚಾರಣಾ ಪ್ರಕರಣವನ್ನು ದಾಖಲುಮಾಡಿರುವ ಬಗ್ಗೆ ಹಾಗೂ ಇಲಾಖಾ ವಿಚಾರಣೆ ನಡೆದಿರುವ ಬಗ್ಗೆ ಜೆರಾಕ್ಸ್ ಪ್ರತಿಗಳನ್ನು ಹಾಜರುಪಡಿಸಿರುತ್ತಾರೆ. ಎದುರುದಾರರು ನೀಡಿರುವ ಸಮಜಾಯಿಷಿಯನ್ನು ಪರಿಶೀಲಿಸಲಾಗಿ, ಪರಿವೀಕ್ಷಣಾ ಟಿಪ್ಪಣಿಯ ಅಂಶವನ್ನು ಸಾರಸಗಟಾಗಿ ಅಲ್ಲಗಳೆದಿರುತ್ತಾರೆ. ಅಲ್ಲದೆ, ಸದರಿ ಪ್ರಕರಣವು ಪೂರ್ವಯೋಜಿತವಾಗಿ ಸಂಚು ರೂಪಿಸಿ ಎದುರುದಾರರನ್ನು ಪ್ರಕರಣದಲ್ಲಿ ಸಿಲುಕಿಸಲು ಸನ್ನಾಹ ಹೂಡಿರುತ್ತಾರೆಂದು ತಿಳಿಸಿರುತ್ತಾರೆ. ಹಾಗೂ ದಾಖಲೆಗಳನ್ನು ಪರಿಶೀಲಿಸಿದಾಗ ಎದುರುದಾರರು ಹಾಜರುಪಡಿಸಿರುವ ಶಿಸ್ತು ಪ್ರಾಧಿಕಾರ ಕಚೇರಿ ಸಂಖ್ಯೆ: ಇವಿ/04/ಕೆ/2018 ಡಿಒಬಿ ನಂ: 970/2018 ಈ ಪ್ರಕರಣದಲ್ಲಿ ನಡೆದಿದೆ ಎನ್ನಲಾದ ಅಭಿಯೋಗ ಸಾಕ್ಷಿ 1 ರಿಂದ 17ರ ವಿಚಾರಣಾ ಹೇಳಿಕೆಗಳು ಸಂಬಂಧಪಟ್ಟ ಪ್ರಾಧಿಕಾರದಿಂದ ಹಾಗೂ ವಿಚಾರಣಾ ಅಧಿಕಾರಿಯವರಿಂದ ದೃಢೀಕರಣವಾಗಿರುವುದಿಲ್ಲ. ಅಲ್ಲದೆ, ಎದುರುದಾರರು ದಿ: 13/12/2020 ರಂದು ಶಿಸ್ತು ಪ್ರಾಧಿಕಾರ ಕಚೇರಿ ಸಂಖ್ಯೆ: ಇವಿ/04/ಕೆ/2018 ಡಿಒಬಿ ನಂ: 970/2018 ಮುಂದೆ ದಾಖಲಿಸಿದೆ ಎನ್ನಲಾದ ಲಿಖಿತ ಹೇಳಿಕೆ ಸಹ ದೃಢೀಕೃತವಾಗಿರುವುದಿಲ್ಲ. ಎದುರುದಾರರು ತನ್ನ ವಿವರಣೆಯಲ್ಲಿ ತನ್ನ ವಿರುದ್ಧ ಇಲಾಖಾ ವಿಚಾರಣೆ ಪ್ರಾರಂಭಿಸಿದರೆ, ಅದು "ಡಬಲ್ ಜಿಯೋಪ್ಪಾರ್ಡೆ" ವ್ಯಾಪ್ತಿಗೆ ಬರುತ್ತದೆಂದು ಹೇಳಿರುತ್ತಾರೆ. ಆದರೆ, ಎದುರುದಾರರು ತನ್ನ ವಿರುದ್ಧ ಈಗಾಗಲೇ ವಿಚಾರಣೆ ನಡೆದು, ಶಿಸ್ತು ಪ್ರಾಧಿಕಾರ ಕಚೇರಿ ಸಂಖ್ಯೆ: ಇವಿ/04/ಕೆ/2018 ಡಿಒಬಿ ನಂ: 970/2018ರ ಆದೇಶ ಪ್ರತಿಯನ್ನು ಲಗತ್ತಿಸಿರುವುದಿಲ್ಲ. ಮೇಲ್ಕಂಡ ಕಾರಣಗಳಿಗಾಗಿ ಎದುರುದಾರರು "ನಿರ್ಣಿತ ಆದೇಶ" ಕ್ಕೆ ಪೂರಕವಾಗಿ ಯಾವುದೇ ದೃಢೀಕೃತ ದಾಖಲೆಗಳನ್ನು ಹಾಜರುಪಡಿಸಿದೆ ಇರುವುದರಿಂದ, ಎದುರುದಾರರು ನೀಡಿರುವ ಸಮಜಾಯಿಷಿಯನ್ನು ಪರಿಗಣಿಸಲು ಬರುವುದಿಲ್ಲ. ಸಾಕ್ಷಿದಾರರ ಹೇಳಿಕೆಗಳು, ದೂರು ಅರ್ಜಿ ಹಾಗೂ ತನಿಖಾಧಿಕಾರಿಗಳು ಸಂಗ್ರಹಿಸಿದ ದಾಖಲೆಗಳು ಹಾಗೂ ಇತರೆ ಅಂಶಗಳು ಎದುರುದಾರರ ದುರ್ನಡತೆಯನ್ನು ಮೇಲ್ನೋಟಕ್ಕೆ ತೋರಿಸಿರುತ್ತದೆ.

3. ಸಾಕ್ಷಿದಾರರ ಹೇಳಿಕೆಗಳು ದೂರು ಅರ್ಜಿ ಹಾಗೂ ತನಿಖಾಧಿಕಾರಿಗಳು ಸಂಗ್ರಹಿಸಿದ ದಾಖಲೆ ಮತ್ತು ಇತರೆ ಅಂಶಗಳನ್ನು ಪರಿಶೀಲಿಸಿದಾಗ, ಎದುರುದಾರರ ವಿರುದ್ಧ ನಡವಳಿಯನ್ನು ಕೈಬಿಡಲು ಸೂಕ್ತ ಸಮಂಜಸ / ಸಮಾಧಾನಕರ ಕಾರಣ ಇಲ್ಲವೆಂದು ಅಭಿಪ್ರಾಯಕ್ಕೆ ಬರಲಾಗಿದೆ.

4. ಕಡತದಲ್ಲಿರುವ ಸಂಗತಿಗಳು ಹಾಗೂ ದಾಖಲಾತಿಗಳಿಂದ ಎದುರುದಾರರು ಸರ್ಕಾರಿ/ಸಾರ್ವಜನಿಕ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠೆ ತೋರಿಸದೆ, ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ವತನೆ / ದುರ್ನಡತೆ ಎಸಗಿರುವುದು ಮೇಲ್ನೋಟಕ್ಕೆ ಕಂಡು ಬರುತ್ತದೆ.

5. ಆದುದರಿಂದ, ಎದುರುದಾರರ ವಿರುದ್ಧ ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯವಳಿ 1966 ರ (ಪ್ರಸ್ತುತ ಕರ್ನಾಟಕ ನಾಗರೀಕ ಸೇವಾ (ನಡೆತೆ) 2021), ನಿಯಮ 3(1) (i) ರಿಂದ (iii)ರ ಉಲ್ಲಂಘನೆಗಾಗಿ ಶಿಸ್ತು ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3) ರ ಅಡಿ ಪ್ರದತ್ತವಾದ ಅಧಿಕಾರದಡಿ, ಈ ವರದಿಯ ಮೂಲಕ ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ ಹಾಗೂ ಎದುರುದಾರರ ವಿರುದ್ಧ ಇಲಾಖಾ ವಿಚಾರಣೆ ಮಾಡಲು, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957 ರ ನಿಯಮ 14(ಎ) ರಡಿ ಉಪಲೋಕಾಯುಕ್ತರಿಗೆ ವಹಿಸಬೇಕೆಂದು ಕೋರಿದೆ.

6. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(4) ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಮೂರು ತಿಂಗಳೊಳಗೆ ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

22/12/21

(ನ್ಯಾಯಮೂರ್ತಿ ಬಿ.ಎಸ್.ಪಾಟೀಲ್)
ಉಪಲೋಕಾಯುಕ್ತರು-1
ಕರ್ನಾಟಕ ರಾಜ್ಯ, ಬೆಂಗಳೂರು